**<u>ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ರವರ ನ್ಯಾಯಾಲಯ, ಕೊಪ್ಪ</u>**

**<u>ಸಿ.ಸಿ. ನಂ. *98/2023*</u>**

| | | |
|---|---|---|
| *ಫಿರ್ಯಾದುದಾರರು* | ಃ | ಸರ್ಕಾರದ ಪರವಾಗಿ ಜಯಪುರ ಪೊಲೀಸರು |

**ವಿರುದ್ಧ**

| | | |
|---|---|---|
| ಆರೋಪಿತರು | 1 | ರಾಜು ಬಿನ್ ಲೇಟ್ ತಮ್ಮಯ್ಯ, ವಾಸ ಕಾಶೀಪುರ, ಶಿವಮೊಗ್ಗ |
| | 3 | ಮೊಹಮ್ಮದ್ ಅಜ್ಮಲ್ ಬಿನ್ ಮೊಹಮ್ಮದ್ ಇಲಿಯಾಜ್, ವಾಸ ಪೇನ್ಷನ್ ಮೊಹಲ್ಲ, ಹಾಸನ, |
| | 4 | ನಾಗರಾಜ ಬಿನ್ ಲೇಟ್ ರಂಗಪ್ಪ, ವಾಸ ವಿಜಯಪುರ, ಚಿಕ್ಕಮಗಳೂರು. |
| | 5 | ಸಾಬಿತ್ ಬಿನ್ ಉಹಸಾನ್ ಉಲ್ಲಾ ಷರೀಫ್, ವಾಸ ಹೊಸಲನೆ ರಸ್ತೆ, ಹಾಸನ, |
| | 7 | ಸಂದೀಪ ಯು.ಕೆ. ಬಿನ್ ಲೇಟ್ ಕರಿಬಸಪ್ಪ, ವಾಸ ವಿನೋಬನಗರ, ಶಿವಮೊಗ್ಗ |
| | 9 | ರವಿಕುಮಾರ ಬಿನ್ ಮಂಜುನಾಥ, ವಾಸ ವಿದ್ಯಾನಗರ, ಶಿವಮೊಗ್ಗ |
| | 10 | ರವಿ ಬಿನ್ ಲೇಟ್ ಗೆಜ್ಜಿರಾಜ್, ವಾಸ ವಿನೋಬನಗರ, ಶಿವಮೊಗ್ಗ |
| | 11 | ಶರತ್ ಪಿ.ಎಂ. ಬಿನ್ ಪಿ. ಮಾಲತೇಶ್ , ವಾಸ ವಿನೋಬನಗರ, ಶಿವಮೊಗ್ಗ |
| | 12 | ಆನಂದ ಡಿ. ಬಿನ್ ಧರ್ಮ, ವಾಸ ನಂದೀಪುರ, ಮೂಡಿಗೆರೆ ತಾಲ್ಲೂಕು. |
| | 13 | ಸುರೇಶ್ ಬಿನ್ ಲಕ್ಷ್ಮಣಗೌಡ, ಜನ್ನಾಪುರ, ಮೂಡಿಗೆರೆ ತಾಲ್ಲೂಕು. |
| | 14 | ಸುಂದರೇಶ ಬಿನ್ ಸುಬ್ಬೇಗೌಡ, ವಾಸ ಮೂಡಿಗೆರೆ ತಾಲ್ಲೂಕು. |
| | 17 | ಶ್ರೀಕಾಂತ್ ಬಿನ್ ಲೇಟ್ ಪುಟ್ಟೇಗೌಡ, ಬಣಕಲ್, ಮೂಡಿಗೆರೆ ತಾಲ್ಲೂಕು |
| | 18 | ಸಲೀಂ ಬಿನ್ ಉಮರಬ್ಬ, ಗಂಗನಕೊಪ್ಪ, ಹೊಸನಗರ ತಾಲ್ಲೂಕು |
| | 19 | ತ್ಯಾಗರಾಜ್ ಬಿನ್ ಲೇಟ್ ಶ್ರೀನಿವಾಸ, ವಾಸ ಹೊಸಮನೆ, ಶಿವಮೊಗ್ಗ |
| | 21 | ಉದಯಕುಮಾರ ಶೆಟ್ಟಿ ಬಿನ್ ಲೇಟ್ ಸಂಜೀವಶೆಟ್ಟಿ, |

| | | |
|---|---|---|
| | | ವಾಸ ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ |
| | 22 | ಶರತ್ ಬಿನ್ ಶಿವಣ್ಣಗೌಡ, ಕೆಸಗೋಡು, ವಾಸ ಮೂಡಿಗೆರೆ ತಾಲ್ಲೂಕು |
| | 23 | ವಿಕ್ಕಿ ಬಿನ್ ಲೇಟ್ ಲಕ್ಷ್ಮಣಗೌಡ, ವಾಸ ಕೊಟ್ಟಿಗೆಹಾರ, ಮೂಡಿಗೆರೆ ತಾಲ್ಲೂಕು. |
| | 24 | ಮಂಜು ಬಿನ್ ಲೇಟ್ ಬಾಬು, ವಾಸ ರಾಘವೇಂದ್ರ ನಗರ, ಕೊಪ್ಪ ತಾಲ್ಲೂಕು |
| | 29 | ಅಕ್ಬರ್ ಬಿನ್ ಲೇಟ್ ಅಬ್ಬುರ್ ಸಾಬ್, ವಾಸ ಬೇರುಕೊಡಿಗೆ, ಕೊಪ್ಪ ತಾಲ್ಲೂಕು |
| | 30 | ಪೂರ್ಣೇಶ್ ಅಲಿಯಾಸ್ ಪುರಿ ಬಿನ್ ಲೇಟ್ ಕೃಷ್ಣಪ್ಪ, ವಾಸ ಚಿಟ್ಟೆಮಕ್ಕಿ, ತೀರ್ಥಹಳ್ಳಿ |
| | 31 | ರವಿಕುಮಾರ್ ಬಿನ್ ಲೇಟ್ ಹಾಲೇಗೌಡ, ವಾಸ ಹೌಸಿಂಗ್ ಬೊರ್ಡ್, ಚಿಕ್ಕಮಗಳೂರು. |
| | 32 | ಮಂಜುನಾಥ್ ಬಿನ್ ಗಿಡ್ಡೇಗೌಡ, ವಾಸ ವಿನೋಬನಗರ, ಶಿವಮೊಗ್ಗ |
| | 34 | ಚೇತನ್ ಬಿನ್ ಲೇಟ್ ನಾಗೇಶ್, ಮೂಡಿಗೆರೆ ತಾಲ್ಲೂಕು |
| | 35 | ಆನಂತ ಬಿನ್ ಲೇಟ್ ಸುಬ್ಬರಾವ್,ಜಯಪುರ ಗ್ರಾಮ, ಕೊಪ್ಪ ತಾಲ್ಲೂಕು. |

* * *

## <u>ಅಪರಾಧಿಕ ಪ್ರಕ್ರಿಯಾ ಸಂಹಿತೆ ಕಲಂ *313* ರ ಪ್ರಕಾರ ಆರೋಪಿತರ ಹೇಳಿಕೆ</u>

ಪ್ರ:1ಃಅಭಿಯೋಜನೆಯವರ ಸಾಕ್ಷಿದಾರರ ನಿಮ್ಮ ವಿರುದ್ಧ ಕೊಟ್ಟಿರುವ ಹೇಳಿಕೆಗಳನ್ನು ಕೇಳಿದ್ದೀರಾ?

| | | | |
|---|---|---|---|
| ಉಃ | ಆ-1 ಕೇಳಿದ್ದೇನೆ | ಉಃ | ಆ-3 ಕೇಳಿದ್ದೇನೆ |
| ಉಃ | ಆ-4 ಕೇಳಿದ್ದೇನೆ | ಉಃ | ಆ-5 ಕೇಳಿದ್ದೇನೆ |
| ಉಃ | ಆ-7 ಕೇಳಿದ್ದೇನೆ | ಉಃ | ಆ-9 ಕೇಳಿದ್ದೇನೆ |
| ಉಃ | ಆ-10 ಕೇಳಿದ್ದೇನೆ | ಉಃ | ಆ-11 ಕೇಳಿದ್ದೇನೆ |
| ಉಃ | ಆ-12 ಕೇಳಿದ್ದೇನೆ | ಉಃ | ಆ-13 ಕೇಳಿದ್ದೇನೆ |
| ಉಃ | ಆ-14 ಕೇಳಿದ್ದೇನೆ | ಉಃ | ಆ-17 ಕೇಳಿದ್ದೇನೆ |
| ಉಃ | ಆ-18 ಕೇಳಿದ್ದೇನೆ | ಉಃ | ಆ-19 ಕೇಳಿದ್ದೇನೆ |
| ಉಃ | ಆ-21 ಕೇಳಿದ್ದೇನೆ | ಉಃ | ಆ-22 ಕೇಳಿದ್ದೇನೆ |
| ಉಃ | ಆ-23 ಕೇಳಿದ್ದೇನೆ | ಉಃ | ಆ-24 ಕೇಳಿದ್ದೇನೆ |

| | | | |
|---|---|---|---|
| ಉಃ | ಆ-29 ಕೇಳಿದ್ದೇನೆ | ಉಃ | ಆ-30 ಕೇಳಿದ್ದೇನೆ |
| ಉಃ | ಆ-31 ಕೇಳಿದ್ದೇನೆ | ಉಃ | ಆ-32 ಕೇಳಿದ್ದೇನೆ |
| ಉಃ | ಆ-34 ಕೇಳಿದ್ದೇನೆ | ಉಃ | ಆ-35 ಕೇಳಿದ್ದೇನೆ |

ಪ್ರಃ2ಃ ಪ್ರಾಸಾ-1 ಶ್ರೀ ಗುಂಜನ್ ಆರ್ಯ, ಎ.ಎಸ್.ಪಿ., ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ23/09/2022 ರಂದು ರಾತ್ರಿ ಸುಮಾರು 8-00 ಗಂಟೆಗೆ ಜಯಪುರ ಗ್ರಾಮದ ಡಿಲೇೃಟ್ ಹೋಮ್ ಸ್ಟೇನಲ್ಲಿ ಅಕ್ರಮವಾಗಿ ಜೂಜಾಟ ಆಡುತ್ತಿದ್ದಾರೆಂದು ಮಾಹಿತಿ ಬಂದಿದ್ದು ನಂತರ ನಾನು, ಚಾಸಾ 11 ಹಾಗೂ ವಾಹನ ಚಾಲಕರೊಂದಿಗೆ ರಾತ್ರಿ 8-15 ರ ಸಮಯಕ್ಕೆ ಕೊಪ್ಪವನ್ನು ಬಿಟ್ಟು ನಂತರ ಚಾಸಾ 4, ಚಾಸಾ 5 ಸದರಿಯವರಿಗೆ ಫೋನ್ ಮೂಲಕ ಕರೆ ಮಾಡಿ ಜಯಪುರ ಬಸ್ ನಿಲ್ದಾಣದ ಬಳಿ ಬರುವಂತೆ ತಿಳಿಸಿದ್ದೆನು. ನಂತರ ಸದರಿ ವಿಚಾರವನ್ನು ಚಾಸಾ 4 ಮತ್ತು 5 ರವರಿಗೆ ತಿಳಿಸಿದೆನು. ಖಾಸಗಿ ಕಾರಿನಲ್ಲಿ ನಾವು ಬಸ್ ನಿಲ್ದಾಣದಿಂದ ಮಾಹಿತಿ ಇದ್ದ ಸ್ಥಳಕ್ಕೆ ಹೋಗಿರುತ್ತೇವೆ. ನಂತರ ರಿಸೆಪ್ಶನ್ ಗೆ ಹೋಗಿ ರೂಮ್ ನಂಬರ್ 1 ರಲ್ಲಿ ನಾನು ಹಾಗೂ ಸಿಬ್ಬಂದಿಗಳು ಹೋದಾಗ ಅಂದರ್ ಬಾಹರ್ ಎಂಬ ಶಬ್ದ ಕೇಳಿ ಬರುತ್ತಿತ್ತು. ಸದರಿ ರೂಮಿನ ಒಳಗೆ ಪ್ರವೇಶ ಮಾಡಿದಾಗ ರೂಮ್ ನಂಬರ್.1 ಆಗಿರುತ್ತದೆ. ಆಗ ಸಮಯ 9-00 ಗಂಟೆಯಾಗಿತ್ತು. ಒಳಗಿದ್ದವರ ಕೈಯಲ್ಲಿ ಇಸ್ಪೀಟ್ ಎಲೆಗಳು ಇದ್ದು ಒಟ್ಟು 3 ಟೇಬಲ್ ಗಳು ಇದ್ದವು. ಸದರಿ ಸ್ಥಳದಲ್ಲಿ ಸುಮಾರು 34 ಪ್ಲಾಸ್ಟಿಕ್ ಚೇರುಗಳು ಇರುವುದು ಕಂಡುಬಂದಿತು. ನಂತರ ಇಸ್ಪೀಟ್ ಎಲೆಗಳನ್ನು ಹಿಡಿದುಕೊಂಡಿದ್ದ ವ್ಯಕ್ತಿಯ ಹೆಸರು ವಿಳಾಸ ಕೇಳಿದಾಗ ಆತನ ಹೆಸರು ರಾಜು, ಬಿನ್ ಲೇಟ್ ತಮ್ಮಯ್ಯ ಎಂದು ತಿಳಿಸಿದರು. ಪರವಾನಿಗೆ ಬಗ್ಗೆ ವಿಚಾರಿಸಲಾಗಿ ಜೂಜಾಡಲು ಯಾವುದೇ ಪರವಾನಿಗೆ ಇರುವುದಿಲ್ಲ ಎಂದು ತಿಳಿಸಿದರು. ಸದರಿ ಸ್ಥಳದಲ್ಲಿ ಒಟ್ಟು 34 ಜನರು ಇದ್ದು ಉಳಿದವರ ಹೆಸರು ನನಗೆ ನೆನಪಿರುವುದಿಲ್ಲ. ನಂತರ ಚಾಸಾ.2 ಮತ್ತು ಚಾಸಾ.3, ಮಹಜರ್ ಸಾಕ್ಷಿಗಳನ್ನು ನಾವೇ ಬರಮಾಡಿಕೊಂಡಿದ್ದೆವು. ಅವರ ಸಮಕ್ಷಮ 9-30 ರಿಂದ 11-30 ಗಂಟೆವರೆಗೆ ಪಂಚನಾಮೆಯನ್ನು ಜರುಗಿಸಿದ್ದೆವು. ಸದರಿ ಸ್ಥಳದಲ್ಲಿ ಐದು ಲಕ್ಷದ ಐವತ್ತು ನಾಲ್ಕು ರೂಪಾಯಿಗಳನ್ನು ವಶಕ್ಕೆ ಪಡೆದೆವು. ಒಟ್ಟು 52 ಇಸ್ಪೀಟ್ ಎಲೆಗಳು, 3

ಟೇಬಲ್‌ಗಳು, 34 ಪ್ಲಾಸ್ಟಿಕ್ ಚೇರುಗಳು, ಪ್ಲಾಸ್ಟಿಕ್ ಬಾಕ್ಸುಗಳು ಇದ್ದು ಅವುಗಳನ್ನು ಹಾಗೂ ಎಲ್ಲಾ ಆರೋಪಿಗಳ ಮೊಬೈಲ್ ಗಳನ್ನು ವಶಕ್ಕೆ ಪಡೆಯಲಾಯಿತು. ಆರೋಪಿಗಳನ್ನು ರಾತ್ರಿ 12-15 ರ ಸಮಯದಲ್ಲಿ ಠಾಣೆಗೆ ಕರೆದುಕೊಂಡು ಹೋಗಿರುತ್ತೇವೆ. ಠಾಣಾ ಎಸ್.ಹೆಚ್.ಒ., ಅವರಿಗೆ ವರದಿ ಮಾಲು ಹಾಗೂ ಆರೋಪಿತರನ್ನು ವಶಕ್ಕೆ ನೀಡಿರುತ್ತೇನೆ. ಸದರಿ ಮಹಜರ್ ಕಾಲದಲ್ಲಿ ಸ್ಥಳದಲ್ಲಿ ಫೋಟೋಗಳನ್ನು ತೆಗೆದಿರುತ್ತೇವೆ ಎಂದು ನುಡಿಯುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

| | | | |
|---|---|---|---|
| ಉಃ | ಆ-1 ಸುಳ್ಳು | ಉಃ | ಆ-3 ಸುಳ್ಳು |
| ಉಃ | ಆ-4 ಸುಳ್ಳು | ಉಃ | ಆ-5 ಸುಳ್ಳು |
| ಉಃ | ಆ-7 ಸುಳ್ಳು | ಉಃ | ಆ-9 ಸುಳ್ಳು |
| ಉಃ | ಆ-10 ಸುಳ್ಳು | ಉಃ | ಆ-11 ಸುಳ್ಳು |
| ಉಃ | ಆ-12 ಸುಳ್ಳು | ಉಃ | ಆ-13 ಸುಳ್ಳು |
| ಉಃ | ಆ-14 ಸುಳ್ಳು | ಉಃ | ಆ-17 ಸುಳ್ಳು |
| ಉಃ | ಆ-18 ಸುಳ್ಳು | ಉಃ | ಆ-19 ಸುಳ್ಳು |
| ಉಃ | ಆ-21 ಸುಳ್ಳು | ಉಃ | ಆ-22 ಸುಳ್ಳು |
| ಉಃ | ಆ-23 ಸುಳ್ಳು | ಉಃ | ಆ-24 ಸುಳ್ಳು |
| ಉಃ | ಆ-29 ಸುಳ್ಳು | ಉಃ | ಆ-30 ಸುಳ್ಳು |
| ಉಃ | ಆ-31 ಸುಳ್ಳು | ಉಃ | ಆ-32 ಸುಳ್ಳು |
| ಉಃ | ಆ-34 ಸುಳ್ಳು | ಉಃ | ಆ-35 ಸುಳ್ಳು |

ಪ್ರಃ3ಃ ಪ್ರಾಸಾ-4 ಶ್ರೀ ಮೂರ್ತಪ್ಪ, ಎ.ಎಸ್.ಐ., ಇವರು ತಮ್ಮ ಸಾಕ್ಷ್ಯದಲ್ಲಿ ನಾನು ದಿನಾಂಕಃ23/09/2022 ರಂದು ರಾತ್ರಿ 8-00 ಗಂಟೆ ಸಮಯದಲ್ಲಿ ಶೃಂಗೇರಿ ಠಾಣೆಯಲ್ಲಿ ಕರ್ತವ್ಯದಲ್ಲಿದ್ದಾಗ ಠಾಣಾಧಿಕಾರಿಯಾದ ಚಾಸಾ 4 ರವರು ಎ.ಎಸ್.ಪಿ. ಯವರ ಆದೇಶದ ಮೇರೆಗೆ ಜಯಪುರ ಪೋಲಿಸ್ ಠಾಣೆಗೆ ಕರೆದಿದ್ದು, ಅದರಂತೆ ನಾನು ಹಾಗೂ ಚಾಸಾ 4, ಚಾಸಾ 8, ಚಾಸಾ 7 ರವರೊಂದಿಗೆ ಇಲಾಖಾ ಜೀಪಿನಲ್ಲಿ ಜಯಪುರ ಬಸ್ ನಿಲ್ದಾಣಕ್ಕೆ ಹೋದೆವು. ಎ.ಎಸ್. ಪಿ., ಹಾಗೂ ಜಯಪುರದ ಎ.ಎಸ್.ಐ., ರವರಾದ ಚಾಸಾ.5 ರವರು ಬಸ್ ನಿಲ್ದಾಣದ ಬಳಿ ಬಂದರು. ಎ.ಎಸ್.ಪಿ.,ಯವರು ಪಂಚರಾಗಿ ಚಾಸಾ 2 ಮತ್ತು ಚಾಸಾ 3 ರವರನ್ನು ಬರಮಾಡಿಕೊಂಡು

ಜಯಪುರದ ಹೋಮ್ ಸ್ಟೇಯಲ್ಲಿ ಅಕ್ರಮವಾಗಿ ಜೂಜಾಟವಾಡುತ್ತಿರುವುದಾಗಿ ಮಾಹಿತಿ ಬಂದಿದ್ದು, ಅವರೊಂದಿಗೆ ಜಯಪುರದ ಡಿಲೈಟ್ ಹೋಮ್ ಸ್ಟೇ ಬಳಿ ರಾತ್ರಿ 9-10 ಕ್ಕೆ ಹೋದೆವು. ನಂತರ ಸದರಿ ಹೋಮ್ ಸ್ಟೇನ ಮೊದಲ ಕೊಠಡಿಯಲ್ಲಿ ಬೆಂಚುಗಳನ್ನು ಜೋಡಿಸಿ 34 ಜನ ಆಪಾದಿತರು ರೂ.5,54,140/- ಗಳನ್ನು ಪಣವಾಗಿ ಇಟ್ಟುಕೊಂಡು ಅಂದರ್ ಬಾಹರ್ ಆಡುತ್ತಿರುವುದು ಕಂಡುಬಂತು. ನಂತರ ಪಂಚರೊಂದಿಗೆ ಚಾಸಾ 1 ರವರು ದಾಳಿ ನಡೆಸಿದಾಗ 52 ಇಸ್ಪೀಟ್ ಎಲೆಗಳು, 3 ಟೇಬಲ್, 34 ಚೇರುಗಳು , 39 ಮೊಬೈಲ್ , 4 ಕಾರುಗಳು, 3 ಬೆಡ್ ಶೀಟುಗಳು ಇದ್ದು ಅವುಗಳನ್ನು ಪಂಚರ ಮೂಲಕ ಅಮಾನತು ಪಡಿಸಿಕೊಂಡು ಪಂಚರ ಸಮಕ್ಷಮ ರಾತ್ರಿ 9-30 ರಿಂದ 11-30 ರವರೆಗೂ ಮಹಜರನ್ನು ಜಯಪುರ ಠಾಣೆಯ ಚಾಸಾ 10 ರವರು ಬರೆದಿದ್ದು, ನಾನು ಮಹಜರ್ ಅನ್ನು ಓದಿ ಸಹಿ ಮಾಡಿರುತ್ತೇನೆ. ನಂತರ ಚಾಸಾ1 ರವರು ಮುಂದಿನ ಕ್ರಮದ ಬಗ್ಗೆ ಜಯಪುರ ಠಾಣೆಗೆ ತೆರಳಿ ವರದಿ, ಮಾಲು ಮತ್ತು 34 ಜನ ಆರೋಪಿತರನ್ನು ಹಾಜರುಪಡಿಸಿದರು. ನಂತರ ಜಯಪುರ ಠಾಣೆಯಲ್ಲಿ ಸದರಿಯವರ ವಿರುದ್ದ ಪ್ರಕರಣ ದಾಖಲಾಯಿತು ಎಂದು ನುಡಿಯುತ್ತಾರೆ. ಇದಕ್ಕೆ ನೀವು ಏನು ಹೇಳುತ್ತಿರಿ?

| | | | |
|---|---|---|---|
| ಉಃ | ಆ-1 ಸುಳ್ಳು | ಉಃ | ಆ-3 ಸುಳ್ಳು |
| ಉಃ | ಆ-4 ಸುಳ್ಳು | ಉಃ | ಆ-5 ಸುಳ್ಳು |
| ಉಃ | ಆ-7 ಸುಳ್ಳು | ಉಃ | ಆ-9 ಸುಳ್ಳು |
| ಉಃ | ಆ-10 ಸುಳ್ಳು | ಉಃ | ಆ-11 ಸುಳ್ಳು |
| ಉಃ | ಆ-12 ಸುಳ್ಳು | ಉಃ | ಆ-13 ಸುಳ್ಳು |
| ಉಃ | ಆ-14 ಸುಳ್ಳು | ಉಃ | ಆ-17 ಸುಳ್ಳು |
| ಉಃ | ಆ-18 ಸುಳ್ಳು | ಉಃ | ಆ-19 ಸುಳ್ಳು |
| ಉಃ | ಆ-21 ಸುಳ್ಳು | ಉಃ | ಆ-22 ಸುಳ್ಳು |
| ಉಃ | ಆ-23 ಸುಳ್ಳು | ಉಃ | ಆ-24 ಸುಳ್ಳು |
| ಉಃ | ಆ-29 ಸುಳ್ಳು | ಉಃ | ಆ-30 ಸುಳ್ಳು |
| ಉಃ | ಆ-31 ಸುಳ್ಳು | ಉಃ | ಆ-32 ಸುಳ್ಳು |
| ಉಃ | ಆ-34 ಸುಳ್ಳು | ಉಃ | ಆ-35 ಸುಳ್ಳು |

ಪ್ರಃ4ಃ ಪ್ರಾಸಾ-5 ಶ್ರೀ ಶಿವರುದ್ರಪ್ಪ ವಿ.ಆರ್., ಮುಖ್ಯಪೇದೆ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ24/09/2022 ರಂದು ನಾನು ರಾತ್ರಿ ಠಾಣಾ ಎಸ್ ಹೆಚ್ ಒ ಕರ್ತವ್ಯದಲ್ಲಿರುವಾಗ, ರಾತ್ರಿ 12-30 ರ ಸಮಯದಲ್ಲಿ ಚಾಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ಸ್ವತ್ತುಗಳು, ಆರೋಪಿತರು ಮತ್ತು ಮಹಜರಿನೊಂದಿಗೆ ಹಾಜರಾಗಿ ನೀಡಿದ ವರದಿಯನ್ನು ಪಡೆದುಕೊಂಡು ಠಾಣಾ ಎನ್ ಸಿ ನಂಬರ್ 112/2022 ರಲ್ಲಿ ದಾಖಲಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಸದರಿ ಪ್ರಕರಣ ಅಸಂಜ್ಞೇಯ ಅಪರಾಧವಾಗಿದ್ದರಿಂದ ನ್ಯಾಯಾಲಯದ ಅನುಮತಿ ಪಡೆದುಕೊಂಡು ಜೂಜಾಡುತ್ತಿದ್ದ ಆಸಾಮಿಗಳ ವಿರುದ್ದ ಕಲಂ 80 ಕೆಪಿ ಆಕ್ಟ್ ರೀತ್ಯಾ ಪ್ರಕರಣ ದಾಖಲಿಸಿ ತನಿಖೆ ಮಾಡಲು ಅನುಮತಿಗಾಗಿ ನ್ಯಾಯಾಲಯದಲ್ಲಿ ಕೋರಿಕೊಂಡಿರುತ್ತೇನೆ. ನಂತರ ಅದೇ ದಿನ ಬೆಳಿಗ್ಗೆ 10-45 ಗಂಟೆ ಸಮುಯದಲ್ಲಿ ಕೊಪ್ಪ ನ್ಯಾಯಾಲಯದಿಂದ ಪಿಸಿ 690, ದರ್ಶನ್ ರವರು ಘನ ನ್ಯಾಯಾಲಯದ ಆದೇಶದ ಪ್ರತಿಯನ್ನು ತಂದು ಹಾಜರುಪಡಿಸಿದ ಮೇರೆಗೆ ನ್ಯಾಯಾಲಯವು ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿ ತನಿಖೆ ಮಾಡಲು ಅನುಮತಿ ನೀಡಿದ್ದರಿಂದ ಠಾಣಾ ಮೊ.64/2022 ರಲ್ಲಿ ಕಲಂ 80 ಕೆ.ಪಿ. ಆಕ್ಟ್ ರೀತ್ಯಾ ಪ್ರಕರಣ ದಾಖಲು ಮಾಡಿ, ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಂತರ ಅದೇ ದಿನ ಸದರಿ ಪ್ರಕರಣದಲ್ಲಿ ಅಮಾತನುಪಡಿಸಿಕೊಂಡ 52 ಇಸ್ಪೀಟ್ ಎಲೆಗಳು, 5 ಲಕ್ಷದ 140 ರೂ. ನಗದು ಹಣ, 3 ಬೆಡ್ ಶೀಟ್ ಗಳು 3 ಮರದ ಟೇಬಲ್ ಗಳು ಒಂದು ಪ್ಲಾಸ್ಟಿಕ್ ಬಾಕ್ಸ್, 34 ಪ್ಲಾಸ್ಟಿಕ್ ಚೇರುಗಳು, 4 ಕಾರುಗಳು , 39 ಮೊಬೈಲ್ ಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 58/2022 ರಲ್ಲಿ ನಮೂದಿಸಿ ನ್ಯಾಯಾಲಯದ ಅನುಮತಿ ಪಡೆದಿರುತ್ತೇನೆ. ನಂತರ ಪ್ರಕರಣದ ಚಾಸಾ 1 ರವರು ಠಾಣೆಗೆ ಕರೆದುಕೊಂಡು ಬಂದಿದ್ದ 35 ಜನ ಆರೋಪಿಗಳಿಗೆ 41 ಸಿ ಆರ್ ಪಿ ಸಿ ರೀತ್ಯ ನೋಟಿಸ್ ಜಾರಿ ಮಾಡಿರುತ್ತೇನೆ. ನಂತರ ಅದೇ ದಿನ ಪ್ರಕರಣದ ಸಾಕ್ಷಿದಾರರಾದ ಚಾಸಾ 2 ರಿಂದ ಚಾಸಾ.11 ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ 12 ರವರಿಂದ 65 ಬಿ ಕಲಂ ದೃಡೀಕರಣ ಪಡೆದಿರುತ್ತೇನೆ. ದಿನಾಂಕ 26/09/2022 ರಂದು

ಪ್ರಕರದಣಲ್ಲಿ ಕೃತ್ಯ ನಡೆದ ಸ್ಥಳದ ದಾಖಲಾತಿ ಕೋರಿ ಚಾಸಾ.14 ರವರಿಗೆ ಮನವಿ ನೀಡಿರುತ್ತೇನೆ. ಅದೇ ದಿನ ಪ್ರಕರಣದ 35 ನೇ ಆರೋಪಿಯಿಂದ ಸದರಿ ಹೋಮ್ ಸ್ಟೇಯ ಎಲ್ಲಾ ದಾಖಲಾತಿಗಳನ್ನು ತಂದು ಹಾಜರುಪಡಿಸುವಂತೆ ಸೂಚನೆ ನೀಡಿರುತ್ತೇನೆ. ನಂತರ ಅದೇ ದಿನ ಚಾಸಾ 14 ರವರು ನೀಡಿದ ವರದಿಯನ್ನು ಪಡೆದಿರುತ್ತೇನೆ. ಅದೇ ದಿನ ಸದರಿ ಪ್ರಕರಣದ 35 ನೇ ಆರೋಪಿ ಕೃತ್ಯ ನಡೆದಿದೆ ಎನ್ನಲಾದ ಸ್ಥಳದ ದಾಖಲಾತಿಯನ್ನು ಹಾಜರುಪಡಿಸಿರುತ್ತಾರೆ. ದಿಃ27/09/2022 ರಂದು ಪ್ರಕರಣದಲ್ಲಿ ಕೃತ್ಯಕ್ಕೆ ಸಂಬಂಧಿಸಿದ ಅಮಾನತುಪಡಿಸಿಕೊಂಡಿದ್ದ ಸ್ವತ್ತುಗಳನ್ನು 35 ನೇ ಆರೋಪಿಯು ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿದ್ದು ಸದರಿ ನ್ಯಾಯಾಲಯದ ಆದೇಶದ ಮೇರೆಗೆ ದಿನಾಂಕಃ29/09/2022 ರಂದು ವಾಹನ ಬಿಡುಗಡೆ ಮಹಜರನ್ನು ಜರುಗಿಸಿದ್ದು ಸದರಿ ಮಹಜರಿನ ಕಾಲಕ್ಕೆ ಕೆಎ-19/ಎಂ.ಎಚ್.6820 ನಂಬರಿನ ನಿಸಾನ್ ಟೋರೆನೊ ಕಾರನ್ನು ಆರ್ ಸಿ ಮಾಲೀಕರಿಗೆ ಬಿಡುಗಡೆ ಮಾಡಿದ್ದು ಸದರಿ ಮಹಜರನ್ನು 8 ರಿಂದ 8-30 ವರೆಗೂ ಜರುಗಿಸಿ ಪೋಟೊ ತೆಗೆಯಲಾಗಿರುತ್ತದೆ. ಆ ಸಮಯದಲ್ಲಿ ವಿಷ್ಣು ಬಿನ್ ಅಣ್ಣಪ್ಪ ಹಾಗೂ ಶಿವಕುಮಾರ್ ಅವರ ಸಮಕ್ಷಮದಲ್ಲಿ ಮಹಜರ್ ಜರುಗಿಸಿರುತ್ತೇನೆ ಎಂದು ನುಡಿಯುತ್ತಾರೆ. ಇದಕ್ಕೆ ನೀವು ಏನು ಹೇಳುತ್ತಿರಿ?

| | | | |
|---|---|---|---|
| ಉಃ | ಆ-1 ಸುಳ್ಳು | ಉಃ | ಆ-3 ಸುಳ್ಳು |
| ಉಃ | ಆ-4 ಸುಳ್ಳು | ಉಃ | ಆ-5 ಸುಳ್ಳು |
| ಉಃ | ಆ-7 ಸುಳ್ಳು | ಉಃ | ಆ-9 ಸುಳ್ಳು |
| ಉಃ | ಆ-10 ಸುಳ್ಳು | ಉಃ | ಆ-11 ಸುಳ್ಳು |
| ಉಃ | ಆ-12 ಸುಳ್ಳು | ಉಃ | ಆ-13 ಸುಳ್ಳು |
| ಉಃ | ಆ-14 ಸುಳ್ಳು | ಉಃ | ಆ-17 ಸುಳ್ಳು |
| ಉಃ | ಆ-18 ಸುಳ್ಳು | ಉಃ | ಆ-19 ಸುಳ್ಳು |
| ಉಃ | ಆ-21 ಸುಳ್ಳು | ಉಃ | ಆ-22 ಸುಳ್ಳು |
| ಉಃ | ಆ-23 ಸುಳ್ಳು | ಉಃ | ಆ-24 ಸುಳ್ಳು |
| ಉಃ | ಆ-29 ಸುಳ್ಳು | ಉಃ | ಆ-30 ಸುಳ್ಳು |
| ಉಃ | ಆ-31 ಸುಳ್ಳು | ಉಃ | ಆ-32 ಸುಳ್ಳು |
| ಉಃ | ಆ-34 ಸುಳ್ಳು | ಉಃ | ಆ-35 ಸುಳ್ಳು |

ಪ್ರಃ5ಃ ಪ್ರಾಸಾ-5 ರವರು ಮುಂದುವರೆದು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 30/09/2022 ರಂದು ಸ್ವತ್ತುಗಳ ಬಿಡುಗಡೆ ಮಹಜರನ್ನು ಅನಿಲ್ ಡಿಮೆಲ್ಲೋ ಹಾಗೂ ಪ್ರವೀಣ ಅವರ ಸಮಕ್ಷಮದಲ್ಲಿ ಮಹಜರ್ ಜರುಗಿಸಿದ್ದು ಸದರಿ ಪ್ರಕರಣದ 3 ಮರದ ಟೇಬಲ್ ಗಳು 2 ಬ್ಲಾಂಕೆಟ್, ಒಂದು ಬೆಡ್ ಶೀಟ್, 3-4 ಪೈಬರ್ ಚೇರುಗಳನ್ನು ಬಿಡುಗಡೆ ಮಾಡಿ ಸದರಿ ಮಹಜರನ್ನು 8 ರಿಂದ 8-30 ವರಗೂ ಜರುಗಿಸಿರುತ್ತೇನೆ. ದಿಃ03/10/2022 ರಂದು ವಾಹನ ಬಿಡುಗಡೆ ಮಹಜರನ್ನು ಜರುಗಿಸಿ ಸದರಿ ಪ್ರಕರಣದ ಕೆಎ-41 ಪಿ 6793 ರ ನಂಬರಿನ ಮಾರುತಿ ಸುಜುಕಿ ವಾಹನದ ಮಹಜರನ್ನು 7 ರಿಂದ 7-20 ಗಂಟೆವರೆಗೆ, ದಿಃ03/10/2022 ರಂದು ಕೆಎ-20/ಎಂ.ಎ.3558 ನಂಬರಿನ ಪೋರ್ಡ್ಸ್ ಎಕೋ ಸ್ಪೋರ್ಟ್ಸ್ ವಾಹನವನ್ನು ಅದರ ಜಿಪಿಎ ರವರಿಗೆ ಬಿಡುಗಡೆ ಮಾಡಲು ಮಹಜರನ್ನು 7-25 ರಿಂದ 7.45 ಗಂಟೆವರೆಗೆ, ದಿಃ03/10/2022 ರಂದು ಕೃತ್ಯಕ್ಕೆ ಸಂಬಂದಿಸಿದ ಸ್ಯಾಮ್ ಸಂಗ್ ನ ಕಪ್ಪು ಬಣ್ಣದ ಕಪ್ಪು ಬಣ್ಣದ ಮೊಬೈಲ್ ಬಿಡುಗಡೆ ಮಹಜರ್ ಅನ್ನು 7-15 ರಿಂದ 7-30 ಗಂಟೆವರೆಗೆ, ದಿಃ03/10/2022 ರಂದು ಸ್ಯಾಮ್ ಸಂಗ್ ನ ನೀಲಿ ಬಣ್ಣದ ಮೊಬೈಲ್ ಬಿಡುಗಡೆ ಮಹಜರ್ ಅನ್ನು 8 ರಿಂದ 8-30 ರವರೆಗೆ, ಸ್ಯಾಮ್ ಸಂಗ್ ಮೊಬೈಲ್ ಅನ್ನು 8-40 ರಿಂದ 9 ರವರೆಗೆ, ಸ್ಯಾಮ್ ಸಂಗ್ ಕಂಪನಿಯ ಕೀ ಪ್ಯಾಡ್ ಮಾಲೀಕರ ಸಮಕ್ಷಮಸುತ್ತಾರೆ. ಮಹಜರ್ ಅನ್ನು 9 ರಿಂದ 9-20 ಗಂಟೆ ವರೆಗೆ, ದಿಃ03/10/2022 ರಂದು ಕಪ್ಪು ಬಣ್ಣದ ಸ್ಮಾರ್ಟ್ಸ್ ಪೋನ್ ಬಿಡುಗಡೆ ಮಹಜರನ್ನು ರಾತ್ರಿ 9 ರಿಂದ 9-20 ಗಂಟೆವರೆಗೆ, ದಿಃ03/10/2022 ರಂದು ಸ್ಯಾಮ್ ಸಂಗ್ ನೀಲಿ ಬಣ್ಣದ ಮೊಬೈಲ್ ಬಿಡುಗಡೆ ಮಹಜರನ್ನು 9-30 ರಿಂದ 9-50 ಗಂಟೆವರೆಗೆ, ದಿಃ03/10/2022 ರಂದು ಪ್ರಕರಣಕ್ಕೆ ಸಂಬಂಧಿಸಿದಂತೆ ಒನ್ ಪ್ಲಸ್ ಕಂಪನಿಯ ಬಿಡುಗಡೆ ಮಹಜರನ್ನು 9-55 ರಿಂದ 10-15 ಗಂಟೆವರೆಗೆ, ದಿಃ03/10/2022 ರಂದು ಪ್ರಕರಣದ ವಿವೊ ಕಂಪನಿಯ ಸ್ಮಾರ್ಟ್ಸ್ ಪೋನ್ ಮೊಬೈಲ್ ಬಿಡುಗಡೆ ಮಹಜರನ್ನು 10-30 ರಿಂದ 10-45 ಗಂಟೆವರೆಗೆ, ದಿಃ03/10/2022 ರಂದು ರೆಡ್ ಮೀ ಯ ಸ್ಮಾರ್ಟ್ಸ್ ಮತ್ತು ಒನ್ ಪ್ಲಸ್ ಮೊಬೈಲ್ ಗಳನ್ನು ಬಿಡುಗಡೆ ಮಹಜರನ್ನು 10-50 ರಿಂದ 11-10 ಗಂಟೆವರೆಗೆ , ದಿಃ03/10/2022 ರಂದು ವಿವೋ ಕಂಪನಿಯ ಮೊಬೈಲ್ ಸ್ಮಾರ್ಟ್ ಪೋನ್ ಬಿಡುಗಡೆ ಮಹಜರನ್ನು 11-15

ರಿಂದ 11-35 ಗಂಟೆವರೆಗೆ, ದಿಃ03/10/2022 ರಂದು ಒನ್ ಪ್ಲಸ್ ನ ಸ್ಮಾರ್ಟ್ ಮೊಬೈಲ್ ಬಿಡುಗಡೆ ಮಹಜರನ್ನು 11-40 ರಿಂದ 12-00 ರವರೆಗೆ, ದಿಃ04/10/2022 ರಂದು ವಿವೋ ಕಂಪನಿಯ ಮೊಬೈಲ್ ಸ್ಮಾಟ್ ಫೋನ್ ಬಿಡುಗಡೆ ಮಹಜರನ್ನು 12-05 ರಿಂದ 12-25 ಗಂಟೆವರೆಗೆ, ದಿಃ04/10/2022 ರಂದು ವಿವೋ ನ ಕಪ್ಪು ಬಣ್ಣದ ಸ್ಮಾರ್ಟ್ ಮೊಬೈಲ್ ಬಿಡುಗಡೆ ಮಹಜರನ್ನು 12-30 ರಿಂದ 12-50 ಗಂಟೆವರೆಗೆ ಸಾಕ್ಷಿದಾರರಾದ ಶಿವಕುಮಾರ್ ಹಾಗೂ ಗಣೇಶ್ ಅವರ ಸಮಕ್ಷಮ ಹಾಗೂ ದಿಃ21/10/2022 ರಂದು ಪ್ರಕರಣದ ಸ್ಯಾಮ್ ಸಂಗ್ ಜೆ 7 ವ್ಯೂ ಮೊಬೈಲ್ ಬಿಡುಗಡೆ ಮಹಜರನ್ನು ಕೆ ಎಸ್ ಜಯರಾಮು ಹಾಗೂ ರಾಮಚಂದ್ರು ಅವರ ಸಮಕ್ಷಮ 5 ರಿಂದ 5-20 ಗಂಟೆವರೆಗೆ, ದಿಃ05/10/2022 ರಂದು ರೆಡ್ ಮಿ ಯ ಆಕಾಶ ನೀಲಿ ಬಣ್ಣದ ಮೊಬೈಲ್ ಬಿಡುಗಡೆ ಮಹಜರನ್ನು 7-40 ರಿಂದ 8-00 ಗಂಟೆವರೆಗೆ ಸಂಪತ್ ಹಾಗೂ ಸುಮಂತ್ ಹಾಗೂ ಗಣೇಶ್ ಅವರ ಸಮಕ್ಷಮ, ದಿಃ28/10/2022 ರಂದು ಜಯಪುರ ಪೋಲಿಸ್ ಠಾಣಾ ಆವರಣದಲ್ಲಿ ಪ್ರಕರಣದ ಸ್ಯಾಮ್ ಸಂಗ್ ಕಂಪನಿಯ ಸ್ಮಾರ್ಟ್ ಪೋನನ್ನು ಮಹಜರನ್ನು 10-00 ರಿಂದ 10-20 ಗಂಟೆವರೆಗೆ ರಾಘವೇಂದ್ರು ಹಾಗೂ ರವಿ ಅವರ ಸಮಕ್ಷಮ, ದಿಃ03/01/2023 ರಂದು ಜಯಪುರ ಪೋಲಿಸ್ ಠಾಣಾ ಆವರಣದಲ್ಲಿ ಪ್ರಕರಣದ ಕೆಎ-35 ಎನ್ 3948 ರ ನಂಬರಿನ ಮಾರುತಿ ಸುಜಕಿ ಸ್ವಿಫ್ಟ್ ಕಾರನ್ನು 7-30 ರಿಂದ 7-50 ಗಂಟೆಗೆವರೆಗೆ ಸಂಪತ್ ಹಾಗೂ ಸುಮಂತ್ ರವರ ಸಮಕ್ಷಮ ಜರುಗಿಸಿಲಾಯಿತು ಎಂದು ನುಡಿಯುತ್ತಾರೆ ಹಾಗೂ ನ್ಯಾಯಾಲಯದ ಮುಂದಿರುವ 35 ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಇದಕ್ಕೆ ನೀವು ಏನು ಹೇಳುತ್ತಿರಿ?

| | | | |
|---|---|---|---|
| ಉಃ | ಆ-1 ಸುಳ್ಳು | ಉಃ | ಆ-3 ಸುಳ್ಳು |
| ಉಃ | ಆ-4 ಸುಳ್ಳು | ಉಃ | ಆ-5 ಸುಳ್ಳು |
| ಉಃ | ಆ-7 ಸುಳ್ಳು | ಉಃ | ಆ-9 ಸುಳ್ಳು |
| ಉಃ | ಆ-10 ಸುಳ್ಳು | ಉಃ | ಆ-11 ಸುಳ್ಳು |
| ಉಃ | ಆ-12 ಸುಳ್ಳು | ಉಃ | ಆ-13 ಸುಳ್ಳು |
| ಉಃ | ಆ-14 ಸುಳ್ಳು | ಉಃ | ಆ-17 ಸುಳ್ಳು |

| | | | |
|---|---|---|---|
| ಉಃ | ಆ-18 ಸುಳ್ಳು | ಉಃ | ಆ-19 ಸುಳ್ಳು |
| ಉಃ | ಆ-21 ಸುಳ್ಳು | ಉಃ | ಆ-22 ಸುಳ್ಳು |
| ಉಃ | ಆ-23 ಸುಳ್ಳು | ಉಃ | ಆ-24 ಸುಳ್ಳು |
| ಉಃ | ಆ-29 ಸುಳ್ಳು | ಉಃ | ಆ-30 ಸುಳ್ಳು |
| ಉಃ | ಆ-31 ಸುಳ್ಳು | ಉಃ | ಆ-32 ಸುಳ್ಳು |
| ಉಃ | ಆ-34 ಸುಳ್ಳು | ಉಃ | ಆ-35 ಸುಳ್ಳು |

ಪ್ರಃ6ಃ ಪ್ರಾಸಾ-6 ಶ್ರೀಮತಿ ಜ್ಯೋತಿ ಎನ್ ಎ., ಪಿ ಎಸ್ ಐ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ23/09/2022 ರಂದು ನಾನು ಠಾಣೆಯಲ್ಲಿರುವಾಗ ರಾತ್ರಿ 8-35 ಗಂಟೆ ಸಮಯದಲ್ಲಿ ಚಾಸಾ1 ರವರು ನನಗೆ ಫೋನ್ ಮಾಡಿ ಜಯಪುರದಲ್ಲಿರುವ ಡಿಲೈಟ್ ಪುಲ್ ಹೋಮ್ ಸ್ಟೇಯಲ್ಲಿ ಅಕ್ರಮವಾಗಿ ಜೂಜಾಟ ಆಡುತ್ತಿದ್ದಾರೆ ಎಂದು ಮಾಹಿತಿ ತಿಳಿಸಿದ್ದು, ನನಗೆ ಜಯಪುರ ಬಸ್ ನಿಲ್ದಾಣಕ್ಕೆ ಸಿಬ್ಬಂದಿಗಳನ್ನು ಕರೆದುಕೊಂಡು ಬರುವಂತೆ ತಿಳಿಸಿದ್ದು, ಅದರಂತೆ ನಾನು ಚಾಸಾ 10 ರವರನ್ನು ಕರೆದುಕೊಂಡು 8.45 ಕ್ಕೆ ಹೋದಾಗ ಅಲ್ಲಿ ಚಾಸಾ 4, 6 ರಿಂದ 8 ರವರು ಹಾಜರಿದ್ದು ನಂತರ ಎ.ಎಸ್.ಪಿ., ರವರು ಸ್ಥಳಕ್ಕೆ ಬಂದು ನಡೆದುಕೊಂಡು ಹೋಗುತ್ತಿದ್ದ ಪಂಚಾಯ್ತಿದಾರರಾದ ಚಾಸಾ 2 ಮತ್ತು ಚಾಸಾ 3 ರವರಿಗೆ ದಾಳಿಯ ವಿಚಾರ ತಿಳಿಸಿ ಪಂಚರಾಗಿ ಸಹಕರಿಸುವಂತೆ ಕೋರಿ ನೋಟಿಸ್ ಜಾರಿ ಮಾಡಿ, ನಂತರ ಪಂಚರೊಂದಿಗೆ ಇಲಾಖಾ ವಾಹನ ಹಾಗೂ ಖಾಸಗಿ ವಾಹನಗಳಲ್ಲಿ ಡಿಲೈಟ್ ಪುಲ್ ಹೋಮ್ ಸ್ಟೆ ಬಳಿ ಹೋಗಿದ್ದು ಅಲ್ಲಿ ಹೊರಗೆ ವಾಹನಗಳು ನಿಂತಿದ್ದು ಅವುಗಳನ್ನು ಗಮನಿಸಿ ಮುಂದೆ ಹೋಗಿದ್ದು, ಡಿಲೈಟ್ ಪುಲ್ ಹೋಮ್ ಸ್ಟೆ ಕೆಳಅಂತಸ್ತಿನಲ್ಲಿ ಕೊಠಡಿಯಲ್ಲಿ ಒಳಗೆ ಹೊರಗೆ ಎಂದು ಇಸ್ಪೀಟ್ ಆಡುತ್ತಿದ್ದನ್ನು ಗಮನಿಸಿ, ಚಾಸಾ 1 ರವರು ನಮ್ಮನ್ನು ಕರೆದುಕೊಂಡು ಅಲ್ಲಿ ಕೊಠಡಿ ಸಂಖ್ಯೆ 1 ಕ್ಕೆ ಹೋದಾಗ 3 ಟೇಬಲ್ ಅನ್ನು ಒಂದಕ್ಕೆ ಒಂದು ಜೋಡಿಸಿಕೊಂಡು ಬೆಡ್ ಶೀಟ್ ಗಳನ್ನು ಹಾಸಿಕೊಂಡು ಅದರ ಮೇಲೆ ಇಸ್ಪೀಟ್ ಎಲೆ ಆಡುತ್ತಿದ್ದು, ಹಣವನ್ನು ಇಟ್ಟು ಜೂಜಾಟ ಆಡುತ್ತಿದ್ದುದು ಕಂಡುಬಂತು. ಇಸ್ಪೀಟ್ ಹಿಡಿದಿದ್ದವರ ಹೆಸರು ಕೇಳಿದಾಗ ರಾಜು ಬಿನ್ ತಮ್ಮಯ್ಯ ಎಂದಿದ್ದು ಸದರಿ ಜೂಜಾಟ ಆಡಲು ಸರಕಾರದಿಂದ ಯಾವುದೆ ಪರವಾನಿಗೆ ಇರುವುದಿಲ್ಲ ಎಂದಿರುತ್ತಾರೆ.

ಉಳಿದವರ ಹೆಸರು ಕೇಳಲಾಗಿ ರಾಜಶೇಖರ, ಶ್ರೀಧರ, ಶ್ರೀನಾಥ, ರವಿಕುಮಾರ , ನಾಗರಾಜ , ಸಂದೀಪ, ಬಿಪಿನ್ , ತೇಜಸ್ ಹಾಗೂ ಇತರರು ಒಟ್ಟಾರೆ 35 ಜನ ಇದ್ದರು. ಟೇಬಲ್ ಮೇಲಿದ್ದ ಹಣವನ್ನು ಎಣಿಸಿದಾಗ ರೂ.5,54,140/- ಗಳು ಇದ್ದುದು ಕಂಡುಬಂದಿತು. ಹಾಗೂ ಚೇರುಗಳನ್ನು ಎಣಿಸಲಾಗಿ ಒಟ್ಟು 34 ಚೇರುಗಳು ಇದ್ದು, ಆಟಕ್ಕೆ ಪಣವಾಗಿ ಇಟ್ಟಿದ್ದ 39 ಮೊಬೈಲ್ ಇರುವುದು ಕಂಡು ಬಂತು. ಟೇಬಲ್ ಮೇಲೆ ಒಂದು ಬಾಕ್ಸ್ ಇದ್ದು ಅದನ್ನು ವಶಕ್ಕೆ ಪಡೆಯಲಾಯಿತು. ಆಟಕ್ಕೆ ಬಳಸಿದ 3 ಟೇಬಲ್ ಹಾಗೂ ಹಾಸಿದ್ದ ಬೆಡ್ ಶೀಟ್ ಗಳನ್ನು ವಶಕ್ಕೆ ಪಡೆಯಲಾಯಿತು. ಆಟಕ್ಕೆ ಪಣವಾಗಿಟ್ಟಿದ್ದ 4 ಕಾರುಗಳನ್ನು ವಶಕ್ಕೆ ಪಡೆಯಲಾಯಿತು. ಸದರಿ ಹಣವನ್ನು ಅಲ್ಲೆ ಇದ್ದ ಪ್ಲಾಸ್ಟಿಕ್ ಬಾಕ್ಸಿನಲ್ಲಿ ಹಾಕಿ ಬಿಳಿಬಟ್ಟೆಯಲ್ಲಿ ಸುತ್ತಿ ಚಾಸಾ 1 ಹಾಗೂ 3 ರವರ ಸಹಿ ಮಾಡಿದ ಚೀಟಿ ಅಂಟಿಸಲಾಯಿತು. ಸದರಿ ಮಹಜರನ್ನು ರಾತ್ರಿ 9-30 ರಿಂದ 11-30 ಗಂಟೆವರೆಗೆ ಬರೆದು ಸದರಿ ಸ್ಥಳದ ಫೋಟೊ ತೆಗೆದಿರುತ್ತಾರೆ. ಸದರಿ ಮಹಜರಿಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಪ್ರಕರಣದಲ್ಲಿ ನಾನು ಮೇಲಾಧಿಕಾರಿಗಳ ಮುಂದೆ ನನ್ನ ಹೇಳಿಕೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ ಹಾಗೂ ಈ ದಿನ ನ್ಯಾಯಾಲಯದ ಮುಂದಿರುವ 1, 16, 24, 29, 32, 33 ನೇ ಆರೋಪಿತರನ್ನು ನೋಡಿ ಗುರುತಿಸುತ್ತಾರೆ. ಇದಕ್ಕೆ ನೀವು ಏನು ಹೇಳುತ್ತಿರಿ?

| | | | |
|---|---|---|---|
| ಉಃ | ಆ-1 ಸುಳ್ಳು | ಉಃ | ಆ-3 ಸುಳ್ಳು |
| ಉಃ | ಆ-4 ಸುಳ್ಳು | ಉಃ | ಆ-5 ಸುಳ್ಳು |
| ಉಃ | ಆ-7 ಸುಳ್ಳು | ಉಃ | ಆ-9 ಸುಳ್ಳು |
| ಉಃ | ಆ-10 ಸುಳ್ಳು | ಉಃ | ಆ-11 ಸುಳ್ಳು |
| ಉಃ | ಆ-12 ಸುಳ್ಳು | ಉಃ | ಆ-13 ಸುಳ್ಳು |
| ಉಃ | ಆ-14 ಸುಳ್ಳು | ಉಃ | ಆ-17 ಸುಳ್ಳು |
| ಉಃ | ಆ-18 ಸುಳ್ಳು | ಉಃ | ಆ-19 ಸುಳ್ಳು |
| ಉಃ | ಆ-21 ಸುಳ್ಳು | ಉಃ | ಆ-22 ಸುಳ್ಳು |
| ಉಃ | ಆ-23 ಸುಳ್ಳು | ಉಃ | ಆ-24 ಸುಳ್ಳು |
| ಉಃ | ಆ-29 ಸುಳ್ಳು | ಉಃ | ಆ-30 ಸುಳ್ಳು |
| ಉಃ | ಆ-31 ಸುಳ್ಳು | ಉಃ | ಆ-32 ಸುಳ್ಳು |

| | | | |
|---|---|---|---|
| ಉಃ | ಆ-34 ಸುಳ್ಳು | ಉಃ | ಆ-35 ಸುಳ್ಳು |

ಪ್ರಃ7ಃ ನಿಮಗೆ ಈ ಕೇಸಿನ ಬಗ್ಗೆ ಮತ್ತೆ ಏನಾದರೂ ಹೇಳುವುದು ಇದೆಯೆ?

| | | | |
|---|---|---|---|
| ಉಃ | ಆ-1 ಇಲ್ಲ | ಉಃ | ಆ-3 ಇಲ್ಲ |
| ಉಃ | ಆ-4 ಇಲ್ಲ | ಉಃ | ಆ-5 ಇಲ್ಲ |
| ಉಃ | ಆ-7 ಇಲ್ಲ | ಉಃ | ಆ-9 ಇಲ್ಲ |
| ಉಃ | ಆ-10 ಇಲ್ಲ | ಉಃ | ಆ-11 ಇಲ್ಲ |
| ಉಃ | ಆ-12 ಇಲ್ಲ | ಉಃ | ಆ-13 ಇಲ್ಲ |
| ಉಃ | ಆ-14 ಇಲ್ಲ | ಉಃ | ಆ-17 ಇಲ್ಲ |
| ಉಃ | ಆ-18 ಇಲ್ಲ | ಉಃ | ಆ-19 ಇಲ್ಲ |
| ಉಃ | ಆ-21 ಇಲ್ಲ | ಉಃ | ಆ-22 ಇಲ್ಲ |
| ಉಃ | ಆ-23 ಇಲ್ಲ | ಉಃ | ಆ-24 ಇಲ್ಲ |
| ಉಃ | ಆ-29 ಇಲ್ಲ | ಉಃ | ಆ-30 ಇಲ್ಲ |
| ಉಃ | ಆ-31 ಇಲ್ಲ | ಉಃ | ಆ-32 ಇಲ್ಲ |
| ಉಃ | ಆ-34 ಇಲ್ಲ | ಉಃ | ಆ-35 ಇಲ್ಲ |

ಪ್ರಃ8ಃ ನಿಮ್ಮ ಪರವಾಗಿ ಸಾಕ್ಷಿ ವಿಚಾರಣೆ ಇದೆಯೆ?

| | | | |
|---|---|---|---|
| ಉಃ | ಆ-1 ಇಲ್ಲ | ಉಃ | ಆ-3 ಇಲ್ಲ |
| ಉಃ | ಆ-4 ಇಲ್ಲ | ಉಃ | ಆ-5 ಇಲ್ಲ |
| ಉಃ | ಆ-7 ಇಲ್ಲ | ಉಃ | ಆ-9 ಇಲ್ಲ |
| ಉಃ | ಆ-10 ಇಲ್ಲ | ಉಃ | ಆ-11 ಇಲ್ಲ |
| ಉಃ | ಆ-12 ಇಲ್ಲ | ಉಃ | ಆ-13 ಇಲ್ಲ |
| ಉಃ | ಆ-14 ಇಲ್ಲ | ಉಃ | ಆ-17 ಇಲ್ಲ |
| ಉಃ | ಆ-18 ಇಲ್ಲ | ಉಃ | ಆ-19 ಇಲ್ಲ |
| ಉಃ | ಆ-21 ಇಲ್ಲ | ಉಃ | ಆ-22 ಇಲ್ಲ |
| ಉಃ | ಆ-23 ಇಲ್ಲ | ಉಃ | ಆ-24 ಇಲ್ಲ |
| ಉಃ | ಆ-29 ಇಲ್ಲ | ಉಃ | ಆ-30 ಇಲ್ಲ |

| | | | |
|---|---|---|---|
| ಉಃ | ಆ-31 ಇಲ್ಲ | ಉಃ | ಆ-32 ಇಲ್ಲ |
| ಉಃ | ಆ-34 ಇಲ್ಲ | ಉಃ | ಆ-35 ಇಲ್ಲ |

ಈ ಮೇಲ್ಕಂಡ ಹೇಳಿಕೆಯನ್ನು ನಾನೇ ಸ್ವತಃ ಆರೋಪಿತರಿಗೆ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಬರೆದುಕೊಂಡಿದ್ದು, ಮೇಲೆ ಹೇಳಿರುವುದು ಸತ್ಯ ಹಾಗೂ ಸರಿಯಾಗಿದೆ ಎಂದು ದೃಢೀಕರಿಸುತ್ತೇನೆ.

ದಿನಾಂಕಃ 10.03.2026

ಸಹಿ/- 10.03.2026.
(ಶ್ರೀಮತಿ ನಂದಿನಿ ಎಂ.ಎನ್.)
ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧನ್ಯಾದಂಃ ಕೊಪ್ಪ.

| | | | |
|---|---|---|---|
| | ಆ-1 | | ಆ-3 |
| | ಆ-4 | | ಆ-5 |
| | ಆ-7 | | ಆ-9 |
| | ಆ-10 | | ಆ-11 |
| | ಆ-12 | | ಆ-13 |
| | ಆ-14 | | ಆ-17 |
| | ಆ-18 | | ಆ-19 |
| | ಆ-21 | | ಆ-22 |
| | ಆ-23 | | ಆ-24 |
| | ಆ-29 | | ಆ-30 |
| | ಆ-31 | | ಆ-32 |
| | ಆ-34 | | ಆ-35 |